ದಿನಾಂಕ 01.04.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನವನ್ನು ಭೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಸಿ ಎಂ ಕೆ ವಕೀಲರಿಂದಃ

ದಾವಾ ಸ್ವತ್ತಿಗೆ ಸಂಬಂದ ಪಟ್ಟಂತೆ ಜೋಗೌಡ ಅಲಿಯಾಸ್ ಜೋಗಲಿಂಗೇಗೌಡರವರ ಹೆಸರಿನಲ್ಲಿ ಯಾವುದಾದರೂ ದಾಖಲೆ ಇದೆಯಾ ಎಂದರೇ ಹೌದು. ಯಾವ ದಾಖಲೆ ಇದೆ ಎಂದರೇ ಸಾಕ್ಷಿ ನನ್ನ ಮುತ್ತಾತ್ತನಿಂದ ತಾತನ ಹೆಸರಿಗೆ ಬಂದ ಮೂಲ ದಾಖಲೆ ಇದೆ. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯಾ ಎಂದರೇ ಹಾಜರುಪಡಿಸಿದ್ದೇನೆ. ನೀವು ಹಾಜರುಪಡಿಸಿದ ದಾಖಲೆಯಲ್ಲಿ ಆ ದಾಖಲೆ ಇದೆಯಾ ಎಂದು ಸಾಕ್ಷಿಗೆ ತಾನು ಹಾಜರುಪಡಿಸಿದ ದಾಖಲೆಯನ್ನು ತೋರಿಸಿ ಕೇಳಲಾಗಿ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನನ್ನ ಮುತ್ತಾತ್ತ, ತಾತ ಹಾಗೂ ನಮ್ಮ ವಂಶದವರು ಬೈರಾಪಟ್ಟಣದಲ್ಲಿ ವಾಸ ಇರಲಿಲ್ಲ ಎಂದರೇ ಹೌದು. ಆದರೆ ಶೆಟ್ಟಿಹಳ್ಳಿಯಲ್ಲಿ ಇದ್ದೇವು. ನಾನು ಭೂ ಸ್ವಾ ದೀನಾಧಿಕಾರಿ ಮತ್ತು ಇತರರನ್ನು ಪಕ್ಷಗಾರರನ್ನಾಗಿ ಮಾಡಿ ವಿಭಾಗ ಕೋರಿ ಇದೆ ನ್ಯಾಯಾಲಯದಲ್ಲಿ ಬೇರೆ ದಾವೆ ಸಲ್ಲಿಸಿದ್ದೇನೆ ಎಂದರೇ ಹೌದು. ಆ ದಾವೆಯಲ್ಲಿ ಹಾಜರುಪಡಿಸಿದ ವಂಶವೃಕ್ಷ ಮತ್ತು ಸ್ವತ್ತುಗಳು ಈ ದಾವೆಯಲ್ಲಿ ಹಾಜರುಪಡಿಸಿರುವ ವಂಶವೃಕ್ಷ ಮತ್ತು ಸ್ವತ್ತುಗಳು ಬೇರೆ ಬೇರೆ ಎಂದರೇ ಹೌದು. ಆ ದಾವೆಯಲ್ಲಿ ನಾನು 1ನೇ ವಾದಿ, ಟಿ ಹಚ್ ರಾಜು 2ನೇ ವಾದಿ ಎಂದರೇ ಹೌದು.

2. ದಾವಾ ಸ್ವತ್ತುಗಳು ನನ್ನ ಚನ್ನಮ್ಮರವರ ಹೆಸರಿನಲ್ಲಿ ಇದೆ ಎಂದು ತಿಳಿಸಿದ್ದು ಚನ್ನಮ್ಮ ಯಾವಾಗ ಮೃತಪಟ್ಟಿದ್ದಾರೆ ಎಂದರೇ 20 ವರ್ಷ ಆಗಿರುತ್ತದೆ. ನಿಮ್ಮ ದಾಖಲೆ ಪ್ರಕಾರ ಚನ್ನಮ್ಮ 1960 ರಲ್ಲಿ ಮೃತ ಪಟ್ಟಿದ್ದಾರೆ ಎಂದು ನಿಪಿ-7 ರಲ್ಲಿ ಇದೆ ಎಂದರೇ ಹೌದು. ದಾವಾ ಸ್ವತ್ತಿನ ಪಹಣಿ ಪತ್ರಿಕೆಯಲ್ಲಿ ಇರುವ ಚನ್ನಮ್ಮ 2016-17 ರಲ್ಲಿ ಬ್ಯಾಂಕಿನಿಂದ ಸಾಲ ಪಡೆದಿದ್ದಾರೆ ಎಂದರೇ ಇಲ್ಲ. ಪಹಣಿ ಪತ್ರಿಕೆಯಲ್ಲಿ ನಮೂದು ಆಗಿರುವ ಚನ್ನಮ್ಮ ದಿನಾಂಕ 30.04.2021 ರಲ್ಲಿ ಮೃತ ಪಟ್ಟಿದ್ದಾರೆ ಎಂದರೇ ಅವರೇ ಬೇರೆ ನಾವೇ ಬೇರೆ. ಚನ್ನಮ್ಮರವರ ಹೆಸರಿಗೆ ಖಾತೆಯಾಗಿರುವುದು ಯಾವ ವರ್ಷದಲ್ಲಿ ಎಂದರೇ ಸಾಕ್ಷಿ ನಮ್ಮ ಅಜ್ಜಿ ಬದುಕಿದ್ದಾಗ ಆಗಿದೆ. ಚನ್ನಮ್ಮರವರ ಹೆಸರಿಗೆ ಖಾತೆ IHC 10/1998-99 ರಂತೆ ಖಾತೆ ಆಗಿದೆ ಎಂದರೇ ನಮ್ಮ ಅಜ್ಜಿ ಇದ್ದಾಗಲೇ ಆಗಿದೆ. ನನ್ನ ಅಜ್ಜಿ ಚನ್ನಮ್ಮನ ಗಂಡ ವ್ಯವಸಾಯ ಮಾಡುತ್ತಿದ್ದರು. ಪಹಣಿ ಪತ್ರಿಕೆಯಲ್ಲಿ ನಮೂದು ಆಗಿರುವ ಗಂಡ ಶಾಲಾ ಶಿಕ್ಷಕರು ಆಗಿದ್ದರು ಎಂದರೇ ಇಲ್ಲ. ಅವರೇ

ಬೇರೆ. ನಮ್ಮ ಕುಟುಂಬಕ್ಕೂ ಪ್ರತಿವಾದಿ 4 ರಿಂದ 6 ರವರ ಕುಟುಂಬಕ್ಕೆ ಯಾವುದೇ ಸಂಬಂದ ಇಲ್ಲ. ಅವರ ಪೂರ್ವಜರು ಬೇರೆ ನಮ್ಮ ಪೂರ್ವಜರು ಬೇರೆ.

3. ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದಾಗ ನಮ್ಮ ಕುಟುಂಬ ಬೇರೆ ಅವರ ಕುಟುಂಬ ಬೇರೆ ಎಂದು ಅರ್ಜಿ ವಜಾ ಆಗಿದೆ ಎಂದರೇ ಇಲ್ಲ. ದಿ 30.11.2022 ರಲ್ಲಿ ನಮ್ಮ ಅರ್ಜಿ ವಜಾ ಆಗಿದೆ ಎಂದರೇ ಸರಿಯಲ್ಲ. ದಾವೆಯ 1ನೇ ಯ ಅನುಸೂಚಿ ಸ್ವತ್ತು ಶಾಲಾ ಶಿಕ್ಷಕರಾದ ಟಿ ವೆಂಕಟೇ ಗೌಡರವರಿಗೆ ಸರ್ಕಾರದಿಂದ ಮಂಜೂರು ಆದ ಸ್ವತ್ತು ಎಂದರೇ ಗೊತ್ತಿಲ್ಲ. ನನ್ನ ತಾತ ವೆಂಕಟೇಗೌಡ ದಿ 15.03.1960 ರಲ್ಲಿ ಮೃತ ಪಟ್ಟಿದ್ದಾರೆ ಎಂದು ನಿಪಿ-6 ನ್ನು ಹಾಜರುಪಡಿಸಿದ್ದೇವೆ ಎಂದರೇ ಹೌದು. 1ನೇ ಅನುಸೂಚಿ ಸ್ವತ್ತು ಸರ್ಕಾರದಿಂದ ಯಾವಾಗ ಮಂಜೂರು ಆಗಿದೆ ಎಂದರೇ ಸಾಕ್ಷಿ ನಮ್ಮ ಪಿತ್ರಾರ್ಜಿತ ಸ್ವತ್ತನ್ನು ಸರ್ಕಾರ ಪಡೆದುಕೊಂಡಿದ್ದೆ. ಆ ರೀತಿ ಸರ್ಕಾರ ವಹಿಸಿಕೊಂಡರುವುದಕ್ಕೆ ಪರಿಹಾರ ಕೊಡುವಂತೆ ಮೇಲ್ಮನವಿ ಸಲ್ಲಿಸಿದ್ದೇವೆ. ಆದರ ಪ್ರಕರಣ ಸಂಖ್ಯೆ ಏನು ಎಂದರೇ ಗೊತ್ತಿಲ್ಲ. 2ನೇ ಅನುಸೂಚಿ ಸ್ವತ್ತು ಚನ್ನಮ್ಮ ರವರ ಗಂಡನ ತಿಮ್ಮೇಗೌಡರ ಪಿತ್ರಾರ್ಜಿತ ಸ್ವತ್ತು ಎಂದರೇ ನಮ್ಮದು ಬೇರೆ ಅವರದು ಬೇರೆ. ತಿಮ್ಮೇಗೌಡ, ವೆಂಕಟಗಿರಿಗೌಡ, ಹೊನ್ನೇಗೌಡ ಭಾಗ ಮಾಡಿಕೊಂಡ ಸ್ವತ್ತು 4 ರಿಂದ 6ನೇ ಪ್ರತಿವಾದಿಗಳ ತಂದೆಗೆ ಬಂದಿದೆ ಎಂದರೇ ಇಲ್ಲ.

4. ಈ ದಾವೆಯ 6ನೇ ಅನುಸೂಚಿ ಸ್ವತ್ತು 4 ರಿಂದ 6ನೇ ಪ್ರತಿವಾದಿಗಳ ತಾಯಿಯ ಚನ್ನಮ್ಮ ಸ್ವಯಾರ್ಜಿತ ಸ್ವತ್ತು ಎಂದರೇ ಪಿ ಡಿ ಓ, ಕಾರ್ಯದರ್ಶಿ ಪೋರ್ ಜರಿ ಮಾಡಿ ಕೊಟ್ಟಿದ್ದಾರೆ. ಸರ್ವೆ ನಂ 95/2 ರಲ್ಲಿ 26 ಗುಂಟೆ ವ್ಯವಸಾಯ ಜಮೀನು ಎಂದರೇ ಹೌದು. ಪೋರ್ ಜರಿ ಮಾಡಿ ರದ್ದು ಪಡಿಸಲು ನೋಡುತ್ತಿದ್ದಾರೆ. ಚನ್ನಮ್ಮ ಕ್ರಯಕ್ಕೆ ಪಡೆಯುವ ಮುಂಚೆ ನನ್ನ ತಾತ ಟಿ ಎಂ ವೆಂಕಟೇಗೌಡನ ಹೆಸರಿನಲ್ಲಿ ಇತ್ತು. ಆ ದಾಖಲೆಯನ್ನು ಹಾಜರುಪಡಿಸಿದ್ದೀರ ಎಂದರೇ ಹೌದು. ವಕೀಲರಿಗೆ ಕೊಟ್ಟಿದ್ದೇನೆ. ಈ ದಾವೆಯ 1ನೇ ರಿಂದ 7ನೇ ಅನುಸೂಚಿ ಸ್ವತ್ತ 4 ರಿಂದ 6ನೇ ಪ್ರತಿವಾದಿಯವರ ಪಿತ್ರಾರ್ಜಿತ ಸ್ವತ್ತು ಎಂದರೇ ಸರಿಯಲ್ಲ. ಈ 7 ಅನುಸೂಚಿ ಸ್ವತ್ತುಗಳಲ್ಲಿ ಬೋರ್ ಇದೆ ಎಂದರೇ ಹಳೆದರಲ್ಲಿ ಇರಲಿಲ್ಲ ಈಗ ಗೊತ್ತಿಲ್ಲ. ಯಾವ ಯಾವ ಸ್ವತ್ತುಗಳಲ್ಲಿ ಯಾವ ಬೆಳೆ ಮತ್ತು ಮನೆ ಇದೆ ಎಂದರೇ ನಾವು ಇದ್ದಾಗೆ ಬೈಲು ಇತ್ತು ಈಗ ಮನೆ ಇದ್ದಾವೆ. ಈ ಸ್ವತ್ತುಗಳನ್ನು ನೋಡಿ ಎಷ್ಟು ವರ್ಷ ವಾಗಿದೆ ಎಂದರೇ 20 ವರ್ಷ ಆಗಿದೆ. 20 ವರ್ಷದಿಂದ 4 ರಿಂದ 6ನೇ ಪ್ರತಿವಾದಿಗಳು ಅನುಭವಿಸಿಕೊಂಡು ಬರುತ್ತಿದ್ದಾರೆ. ನಮ್ಮ ಕುಟುಂಬಕ್ಕೂ ಮತ್ತು ದಾವಾ ಸ್ವತ್ತಿಗೆ ಯಾವುದೇ ರೀತಿ ಸಂಬಂದ ಇಲ್ಲ ಎಂದರೇ ಸರಿಯಲ್ಲ. ದಾವಾ ಸ್ವತ್ತುಗಳು 4 ರಿಂದ 6ನೇ ಪ್ರತಿವಾದಿಗಳ ಪಿತ್ರಾರ್ಜಿತ ಸ್ವತ್ತುಗಳು ಅವರೇ

ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೇ ಸಾಕ್ಷಿ ಮೂಲ ಖಾತೆ ದಾರರಿಂದ ಕಾರ್ಯದರ್ಶಿಯನ್ನು ಹಿಡಿದು ತಮ್ಮ ಹೆಸರಿನ್ನು ಕೂರಿಸಿಕೊಂಡಿದ್ದಾರೆ. ಪಹಣಿ ಪತ್ರಿಕೆಯಲ್ಲಿರುವ ಚನ್ನಮ್ಮ ಮತ್ತು ವೆಂಕಟೇಗೌಡ 4 ರಿಂದ 6ನೇ ಪ್ರತಿವಾದಿಗಳ ವಂಶಸ್ಥರು ಎಂದರೇ ನಮ್ಮ ವಂಶಸ್ಥರು ಅಲ್ಲ. 4 ರಿಂದ 6ನೇ ಪ್ರತಿವಾದಿಗಳ ತಂದೆ ವೆಂಕಟೇಗೌಡ ನ ತಂದೆಯ ಹೆಸರು ತಿಮ್ಮೇಗೌಡ ಎಂದರೇ ಗೊತ್ತಿಲ್ಲ. ತಿಮ್ಮೇಗೌಡನ ತಂದೆಯ ಹೆಸರು ಪಿಚಾ ವೆಂಕಟೇಗೌಡನ ಮಗ ಪುಟ್ಟೇಗೌಡ ಎಂದರೇ ಗೊತ್ತಿಲ್ಲ. ಪಿಚಾ ವೆಂಕಟೇಗೌಡನ ಮಗ ಪುಟ್ಟೇಗೌಡನಿಗೆ ತಿಮ್ಮೇಗೌಡ, ವೆಂಕಟಗಿರಿ ಗೌಡ ಉರುಫ್ ಕರೀಗೌಡ ಮತ್ತು ಹೊನ್ನೇಗೌಡ ಎಂದರೇ ಗೊತ್ತಿಲ್ಲ. 3 ಜನ ಮಕ್ಕಳು 1982-83 ರಲ್ಲಿ ದಾವಾ ಸ್ವತ್ತುಗಳು ಒಳಗೊಂಡಂತೆ ವಿಭಾಗ ಮಾಡಿಕೊಂಡಿದ್ದಾರೆ ಎಂದರೇ ಗೊತ್ತಿಲ್ಲ.

5. ಈ ಪೂರ್ವದಲ್ಲಿ ದಾಖಲು ಮಾಡಿದ ದಾವೆಯಲ್ಲಿ ದಾವಾ ಸ್ವತ್ತುಗಳನ್ನು ಸೇರಿಸಿದ್ದೀರ ಎಂದರೇ ಮೊದಲು ಹೌದು ಎಂದು ಹೇಳಿ ನಂತರ ಇಲ್ಲ ಎಂದು ಹೇಳುತ್ತಾರೆ. ಈ ದಾವೆಯಲ್ಲಿ ಇರುವ ಪಕ್ಷಗಾರರನ್ನು ಆ ದಾವೆಯಲ್ಲಿ ಮಾಡಿಲ್ಲ. ಅದರ ಪ್ರತಿಯನ್ನು ಹಾಜರು ಪಡಿಸಲು ತೊಂದರೆ ಇದೆಯಾ ಎಂದರೇ ವಕೀಲರನ್ನು ಕೇಳಬೇಕು. ನಮ್ಮ ಕುಟುಂಬಕ್ಕೆ ಸೇರಿದ ಸ್ವತ್ತುಗಳಿಗೆ ಸಂಬಂದ ಪಟ್ಟಂತೆ 2021 ರಲ್ಲಿ ದಾವೆ ದಾಖಲು ಮಾಡಿದ್ದು 4 ರಿಂದ 6 ನೇ ಪ್ರತಿವಾದಿಯವರ ಸ್ವತ್ತುಗಳನ್ನು ಕಬಾಳಿಸಲು ಸುಳ್ಳು ದಾವೆ ಹಾಕಿದ್ದೇನೆ ಎಂದರೇ ಸರಿಯಲ್ಲ. ವಂಶವೃಕ್ಷ ಮತ್ತು ಇತರೆ ದಾಖಲೆಗಳನ್ನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಅಕ್ರಮ ಲಾಭ ಪಡೆಯುವ ಸೃಷ್ಟಿ ಮಾಡಿದ್ದೆ ಎಂದರೇ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದ ಮೇರೆಗೆ ಬೆರಳಚ್ಚು ಮಾಡಲಾಯಿತು.)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

( ಎದುರುದಾರರು ಮಧ್ಯಂತರ ಅರ್ಜಿ ಒಂದಕ್ಕೆ ತಕರಾರು ಅರ್ಜಿ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

( ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)